ದಿನಾಂಕ 04.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದಃ-**

ಒಂದನೇ ಪ್ರತಿವಾದಿಯ ಗಂಡ ನನಗೆ 7-8 ವರ್ಷಗಳ ಹಿಂದೆ ಪರಿಚಯವಿದ್ದರು. 7-8 ವರ್ಷಗಳ ಹಿಂದೆ ಪರಿಚಯ ಇದ್ದು, ಅವರು ನಮ್ಮ ಊರಿನವರಾಗಿದ್ದರು. ಅವರ ತಂದೆಯ ಬಗ್ಗೆ ನನಗೆ ಗೊತ್ತಿಲ್ಲ. ತಾಯಿಯ ಬಗ್ಗೆ ಗೊತ್ತು. ಒಂದನೇ ಪ್ರತಿವಾದಿಯ ಗಂಡನ ತಂದೆ ಮಡಿಕೇರಿಯ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಅವರು ನನಗೆ ಹೇಳುತ್ತಿದ್ದರು. ಕೆ.ಎ. ಅರವಿನ್ ರವರ ತಂದೆ ಕೆಲಸದಲ್ಲಿದ್ದಾಗ ಮೃತರಾಗಿದ್ದ ಬಗ್ಗೆ ಅರವಿನ್ ನನ್ನ ಬಳಿ ಹೇಳಿದ್ದರು. ನಮ್ಮ ಮನೆಯಿಂದ ಅರವಿನ್ ರವರ ಮನೆಗೆ ಮೂರು ಕಿ.ಮೀಟರ್ ಅಂತರವಿತ್ತು. ಅವರಿಗೆ 10-15 ಎಕರೆ ಕಾಫಿ ತೋಟ ಇರಬಹುದು. ಸದರಿ ಕಾಫಿಗಿಡಗಳಿಗೆ 30 ವರ್ಷ ವಯಸ್ಸಾಗಿರಬಹುದು. ಕಾಫಿ ತೋಟವನ್ನು ಅರವಿನ್ ರವರ ತಂದೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ಅರವಿನ್ ರವರಿಗೆ ಇಬ್ಬರು ಸಹೋದರಿಯರು ಇದ್ದು, ಅವರಿಗೆ ವಿವಾಹವಾಗಿದೆ. ಒಬ್ಬರು ಧಾರವಾಡದಲ್ಲಿದ್ದು ಮತ್ತೊಬ್ಬರು ಬೆಂಗಳೂರಿನಲ್ಲಿ ಇದ್ದಾರೆ. ಮೊದಲನೇ ಸಹೋದರಿಯ ಗಂಡ ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಎರಡನೇ ಸಹೋದರಿಯ ಗಂಡ ಬೆಂಗಳೂರಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ನಡೆಸುತ್ತಿದ್ದಾರೆ ಎಂದರೆ ಸರಿ. ಅರವಿನ್ ರವರ ತಂದೆಗೆ ಇಬ್ಬರು ಸಹೋದರರು. ಅವರು ಅರವಿನ್ ರವರ ಕಾಫಿ ತೋಟದ ಹತ್ತಿರ ವಾಸವಾಗಿದ್ದಾರೆ. ಅರವಿನ್ ಮತ್ತು ಅವರ ತಾಯಿ ಕೋವಿಡ್ ಸಂದರ್ಭದಲ್ಲಿ ಮೃತರಾಗಿರುತ್ತಾರೆ. ನಾನು ವಾದ ಪತ್ರದಲ್ಲಿ ತಿಳಿಸಿದಂತೆ ಅರವಿನ್ ರವರು ದಿಃ

22.04.2021 ರಲ್ಲಿ ಮೃತರಾಗಿರುವುದಿಲ್ಲ ಬದಲಿಗೆ ದಿಃ 03.05.2021 ರಲ್ಲಿ ಮಡಿಕೇರಿಯ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ ಎಂದರೆ ಇರಬಹುದು.

ಅರವಿನ್ ರವರು ನಮ್ಮ ಗ್ರಾಮದ ಸಮುದಾಯ ಭವನದ ಬಳಿ ದಿಃ 03.01.2021 ರಂದು ಬಂದು ನನ್ನ ಬಳಿ ಹಣವನ್ನು ತೆಗೆದುಕೊಂಡಿರುತ್ತಾರೆ. ನಾನು ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ. ಸಾಲದ ಹಣವನ್ನು ಬ್ಯಾಂಕಿನ ಖಾತೆಯ ಮೂಲಕ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಅರವಿನ್ ರವರು ತನ್ನ ಮಗನ ಶಾಲೆಯ ಶುಲ್ಕವನ್ನು ಪಾವತಿಸಲು ಹಾಗೂ ಬ್ಯಾಂಕಿಗೆ ಹಣವನ್ನು ನೀಡಬೇಕಾಗಿರುವುದರಿಂದ ನಗದು ರೂಪದಲ್ಲಿ ಕೇಳಿದ್ದರಿಂದ ನಾನು ಹಣವನ್ನು ನಗದು ಮೂಲಕ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಚಾರವನ್ನು ನಾನು ನನ್ನ ವಾದಪತ್ರದಲ್ಲಿ ತಿಳಿಸಿರುವುದಿಲ್ಲ. ಸಾಲದ ಹಣಕ್ಕೆ ಭದ್ರತೆಯಾಗಿ 2 ಚೆಕ್ ನೀಡುವಂತೆ ನಾನು ಅರವಿನ್ ರವರನ್ನು ಕೇಳಿದ್ದರಿಂದ ಅವರು 2 ಚೆಕ್ ಗಳನ್ನು ಹಣ ಪಡೆದ ದಿವಸ ನನಗೆ ನೀಡಿರುತ್ತಾರೆ. 2 ಚೆಕ್ ಗಳಲ್ಲಿ ಒಂದೇ ದಿನಾಂಕವನ್ನು ನಮೂದಿಸಲಾಗಿದೆ. ಚೆಕ್ ಗಳಲ್ಲಿ ಅರವಿನ್ ರವರ ಸಹಿ ವ್ಯತ್ಯಾಸವಿದೆ ಎಂದರೆ ಸರಿ.

ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ದಿಃ 03.01.2021 ರಂದು ಅರವಿನ್ ರವರು ನನ್ನ ಬಳಿ 4,80,000/- ರೂ. ಗಳನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಭದ್ರತೆಗೋಸ್ಕರ ನಿಪಿ. 1 ಮತ್ತು 2 ರ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರವಿನ್ ರವರು ತಮ್ಮ ಕಾರಿನಲ್ಲಿ ಯಾವಾಗಲೂ ಚೆಕ್ ಪುಸ್ತಕವನ್ನು ಇಟ್ಟುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ನಲ್ಲಿರುವ ಬರವಣಿಗೆ ಮತ್ತು ಸಹಿ ಅರವಿನ್ ರವರದ್ದಲ್ಲ ಎಂದರೆ ಸರಿಯಲ್ಲ. ನಾನು ಅರವಿನ್ ರವರೊಂದಿಗೆ ಅವರ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಅವರಿಗೆ ತಿಳಿಯದಂತೆ ನಿಪಿ. 1 ಮತ್ತು 2 ಚೆಕ್

ಗಳನ್ನು ತೆಗೆದುಕೊಂಡು ಅವರು ಮೃತರಾದ ಬಳಿಕ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಅರವಿನ್ ರವರು ಮೃತರಾಗುವುದಕ್ಕಿಂತ ಪೂರ್ವದಲ್ಲಿ ಚೆಕ್ ಗಳನ್ನು ನಗದೀಕರಣಕ್ಕಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಅರವಿನ್ ರವರು ಹಾಜರುಪಡಿಸದಂತೆ ನನ್ನ ಬಳಿ ಕೇಳಿದ್ದರಿಂದ ನಾನು ಹಾಜರುಪಡಿಸಲಿಲ್ಲ ಎಂದು ಉತ್ತರಿಸಿರುತ್ತಾರೆ. ಚೆಕ್ಕಿನ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ.

ನನ್ನ ಮತ್ತು ಅರವಿನ್ ರವರ ನಡುವೆ ಯಾವುದೇ ಹಣದ ವ್ಯವಹಾರ ಇಲ್ಲದೇ ಇದ್ದುದರಿಂದ ನಾನು ಚೆಕ್ಕುಗಳಲ್ಲಿ ನಮೂದಿಸಿದ ದಿನಾಂಕದಂದು ಅವುಗಳ ನಗದೀಕರಣಕ್ಕಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಹಣವನ್ನು ಸಾಲವಾಗಿ ಪಡೆಯುವ ಅವಶ್ಯಕತೆ ಅರವಿನ್ ರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿದಂತೆ ಅರವಿನ್ ರವರು ಮೃತರಾದ ಬಳಿಕ ಒಂದನೇ ಪ್ರತಿವಾದಿಯನ್ನು ಭೇಟಿ ಮಾಡಿ, ಹಣದ ಬಗ್ಗೆ ಕೇಳಿದಾಗ ಅವರು ತಾನು ನೀಡುವುದಾಗಿ ಒಪ್ಪಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಗಾಗ್ಗೆ ಅರವಿನ್ ರವರ ಮನೆಗೆ ಹೋಗಿ ಬರುತ್ತಿದ್ದೆನು.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿ:
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

(ಸಾಕ್ಷಿದಾರರ ಸಹಿ)